**<u>ದಿನಾಂಕಃ 29.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು: ಶ್ರೀ ಎಂ.ಎಸ್.ಜೆ., ವಾದಿ ಪರ ವಕೀಲರಿಂದ</u>

ನಮ್ಮ ಜಮೀನಿನಲ್ಲಿ ಹಾಲಿ ಹುರುಳಿ ಚೆಲ್ಲಿರುತ್ತೇವೆ. ನಾನು ಈಗೆ 10-15 ವರ್ಷಗಳಿಂದ ಯಾವುದೇ ಬೆಳೆಯನ್ನು ಬೆಳೆದಿಲ್ಲ ಎಂದರೆ ಸರಿಯಲ್ಲ. ಬೆಳೆಯನ್ನು ಬೆಳೆದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನನ್ನು 2019 ರಲ್ಲಿ ಒತ್ತುವರಿ ಮಾಡಲು ಪ್ರಯತ್ನಿಸಿರುತ್ತೇವೆ ಎಂದರೆ ಸಾಕ್ಷಿಯು ನಾವು ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 2019 ರಲ್ಲಿ ವಾದಿಯ ಜಮೀನಿನ ಹುಣಸೆ ಮರದಲ್ಲಿ ಹುಣಸೆಕಾಯಿ ಕೀಳಲು ಪ್ರಯತ್ನಿಸಿರುತ್ತೇವೆ ಎಂದರೆ ಸಾಕ್ಷಿಯು ವಾದಿಯೇ ನಮ್ಮ ಜಮೀನಿಗೆ ಬಂದು ನಮ್ಮ ಮೇಲೆ ಹಲ್ಲೆ ಮಾಡುತ್ತಿದ್ದರೆ ಎಂದು ನುಡಿಯುತ್ತಾರೆ. ವಾದಿಯು ಹುಣಸೆ ಹಣ್ಣನ್ನು ನಾವು ಕೀಳಿದ್ದಕ್ಕೆ ಪ್ರಶ್ನೆ ಮಾಡಿದ್ದಕ್ಕೆ ನಾವು ವಾದಿಯ ವಿರುದ್ದ ಪರಶುರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.





ನನ್ನ ತಾಯಿ ಮೃತರಾದಾಗ ಪೌತಿ ಖಾತೆ ಮಾಡಿಕೊಂಡಿದ್ದು, ವರ್ಷವನ್ನು ಹೇಳಲು ಆಗುವುದಿಲ್ಲ. ನನ್ನ ಹೆಸರಿನಲ್ಲಿರುವ ಜಮೀನನ್ನು ನನ್ನ ತಾಯಿ ಆಕೆಯ ಅಣ್ಣ ಸಣ್ಣಮಲ್ಲಪ್ಪರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸಣ್ಣಮಲ್ಲಪ್ಪ ವಾದಿಯಿಂದ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಭೀಮಚಾರಿ ಹಾಗೂ ನನ್ನ ಮಾವ ಸಣ್ಣಮಲ್ಲಪ್ಪ ಒಂದೇ ದಿನ ವಾದಿಯ ಗಂಡನಿಂದ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 134/1 ರಲ್ಲಿ ಒಟ್ಟು 24 ಎಕರೆ ಖರಾಬು 16 ಗುಂಟೆ ವಿಸ್ತೀರ್ಣ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ಸಣ್ಣಮಲ್ಲಪ್ಪನಿಂದ ಖರೀದಿಸಿದ 4 ಎಕರೆ ಜಮೀನಿನಲ್ಲಿ ಖರಾಬು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 134/1 ರಲ್ಲಿ 16 ಎಕರೆ 16 ಗುಂಟೆ ಜಮೀನಿಗೆ ವಾದಿಯೇ ಸಂಪೂರ್ಣ ಹಕ್ಕುದಾರರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 15 ಎಕರೆ 27 ಗುಂಟೆ ಜಮೀನು ವಾದಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ 4 ಎಕರೆ ಜಮೀನನ್ನು ಮಾರಾಟ ಮಾಡಿದ್ದರು ಕಂದಾಯ ಅಧಿಕಾರಿಗಳೊಂದಿಗೆ ಷರಿಕಾಗಿ 4 ಎಕರೆ 20 ಗುಂಟೆ ಎಂದು ದಾಹಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರಂತೆ 4 ಎಕರೆ 20 ಗುಂಟೆ

ಜಮೀನು ಎಂದು ತಿದ್ದುಪಡಿ ಮಾಡಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿ 4 ಎಕರೆ 20 ಗುಂಟೆ ಜಮೀನನ್ನು ಕ್ರಯ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಯಲ್ಲಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

C/c ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.